ಹಾಗೆ ನೀರು ಕುಡಿದು ಖಾಲಿ ಮಾಡಿದ ಪೇಲೆಯನ್ನೆತ್ತಿಕೊಂಡು ಅಲ್ಲಿಂದ ಹೊರಟುಹೋದ.

ಮುದುಕ ಮುದುಕಿಯರನ್ನು ನೋಡಿದ ಕೂಡಲೇ– ಆಹಾ! ಪಾರಸಿಗಳು. ಗುಜರಾತಿಯಲ್ಲೇ ಮಾತನಾಡಬಹುದು ಎಂದುಕೊಳ್ಳುತ್ತ ಅಲ್ಲಿಂದ ಎದ್ದುನಿಂತು ಮುದುಕಿಗೆ ಮೊದಲು ವಂದಿಸಿ, ಆ ಮೇಲೆ ಮುದುಕನ ಕೈಕುಲುಕಿ– ಇನ್ನೊಮ್ಮೆ ತನ್ನ ಪೂರ್ಣ ಹೆಸರಿನಿಂದ ಪರಿಚಯ ಹೇಳಿ ಬಂದ ಉದ್ದೇಶವನ್ನೂ ತಿಳಿಸಿದ. 'ಅಡ್ಡವಾಗುವ ಸಿದ್ಧತೆಯಲ್ಲಿದ್ದೀರೇನೋ?' ಎನ್ನುವಷ್ಟರಲ್ಲಿ ಪಾರಸೀ ಮುದುಕ, 'ನಮಗೆ ಯಾವ ತೊಂದರೆಯೂ ಆಗಿಲ್ಲ. ಕೂತುಕೊಳ್ಳಿ. ಬಂದದ್ದು ಸಂತೋಷವಾಯಿತು. ಅಡ್ಡವಾಗುವುದು ದಿನವೂ ಇದ್ದದ್ದೇ– ಬೇರೆ ಏನು ಕೆಲಸ ನಮಗೆ?' ಎಂದ. ಇಬ್ಬರ ಮೋರೆ ನೋಡಿದರೇನೆ ಗೊತ್ತಾಗುವ ಹಾಗಿತ್ತು– ತಾನು ಬಂದದ್ದರಿಂದ ನಿಜಕ್ಕೂ ಸಂತೋಷವಾಗಿದೆಯೆಂದು, ಮೂವರೂ ಸೋಫಾಗಳಲ್ಲಿ ಕುಳಿತುಕೊಂಡರು.

'ನನ್ನ ಹೆಸರು ಜಮಶೇದ– ಜಮಶೇದಜೀನಸರ್ವಾನಜೀ ದಾರೂವಾಲ. ಇವಳು ನನ್ನ ಹೆಂಡತಿ, ಫ್ರೇನೀ. ನೀವು ಕಾಣಲು ಬಂದ ಸೋರಾಬಜೀ ಪಟೇಲ ನಮ್ಮ ಮೊಮ್ಮಗ– ನನ್ನ ಗತಿಸಿದ ಅಕ್ಕನ ಒಬ್ಬಳೇ ಒಬ್ಬ ಮಗಳು ರತಿಯ ಮಗ. ಇವನನ್ನು ಹೆರುವಾಗಲೇ ರತಿ ತೀರಿಕೊಂಡಳು. ನಾವೇ ಇವನನ್ನು ದೊಡ್ಡವನನ್ನು ಮಾಡಿದೆವು. ಇವನಿಗೆ ಒಬ್ಬ ಮಗನಿದ್ದಾನೆ. ಪಂಚಗಣಿಯ ಪಬ್ಲಿಕ್ ಸ್ಕೂಲಿನಲ್ಲಿ ಕೊನೆಯ ವರ್ಷಕ್ಕೆ ಓದುತ್ತಿದ್ದಾನೆ. ನಾವು ಪಾರ್ಸಿಗಳು. ನೋಡಿದ ಕೂಡಲೇ ಗೊತ್ತಾಗಿರಬೇಕು. ಸೋರಾಬ ಮತ್ತು ಅವನ ಹೆಂಡತಿ ಡಾಯನಾ ಗೆಳೆಯನೊಬ್ಬನ ಮಕ್ಕಳ 'ನವಜೋತ'ಕ್ಕೆ ಹೋಗಿದ್ದಾರೆ. ಇಡಿಯ ದಿನ ಹೊರಗೇ ಉಳಿಯುವ ಕಾರ್ಯಕ್ರಮ. ಸಂಜೆ ಬರಲು ತಡವಾಗಬಹುದು. ಆಗ ನಮ್ಮ ಕೆಲಸದ ಮನುಷ್ಯ ಧೋಂಡೂಗೆ ಏನೋ ಹೇಳುತ್ತಿದ್ದಿರಲ್ಲ?' ಜಮಶೇದ ಕಿವಿಯ ಮೇಲೆ ಬಿದ್ದ ಮಾತುಗಳ ಬಗ್ಗೆ ಕುತೂಹಲ ಪ್ರಕಟಿಸುವ ಮೂಲಕ ಮಾತಿಗೆ ಚಾಲನೆ ಕೊಟ್ಟ.

ಜಮಶೇದ ಮಲಗುವ ಕೋಣೆಯಿಂದ ಬರುವಾಗ ಹತ್ತೀಬಟ್ಟೆಯ ಬಿಳಿಯ ಪ್ಯಾಂಟು, ಬಿಳಿಯ ಶರ್ಟುಗಳನ್ನು ಧರಿಸಿ ಬಂದಿದ್ದ ತಲೆಗೆ, ಮಧ್ಯಭಾಗವನ್ನಷ್ಟೇ ಮುಚ್ಚುವಂತೆ ಬಿಳಿಯ ನೂಲಿನಿಂದ ಹೆಣೆದು ಮಾಡಿದ ಚಕ್ರಾಕಾರದ ಕಿರಿಯ ಟೋಪಿ. ಫ್ರೇನಿ ಕೊರಳ ಸುತ್ತಲೂ ಕಸೂತಿಯುಳ್ಳ ತಿಳಿಗುಲಾಬಿ ಬಣ್ಣದ 'ಹೌಸ್‌ಕೋಟ್' ತೊಟ್ಟಿದ್ದಳು. ಇಬ್ಬರೂ ತೊಟ್ಟ ಉಡುಪನ್ನು ಲಕ್ಷ್ಯಕ್ಕೆ ತಂದುಕೊಳ್ಳುತ್ತ ರಾವ್‌ಜೀಭಾಯಿ ಮಾತಿಗೆ ಆರಂಭಿಸಿದ: 'ಹೌದು. ಹೇಳುತಾ ಇದ್ದೆ. ನಾನು ಹೀಗೆ ಉಟ್ಟ ಬಟ್ಟೆಯಲ್ಲೇ ಹೇಗೆ ಹೊರಟು ಬಂದೆ ಎಂದು' ಎಂದು ಆರಂಭಿಸಿ ಕೆಲಹೊತ್ತಿನ ಮೊದಲು ಕೆಳಗಿನ ಗೇಟಿನಲ್ಲಿ ನಡೆದದ್ದನ್ನು ತಿಳಿಸಿದ.

'ಆ ಚೌಕಿದಾರ ಆ ಚಿಕ್ಕ ಹುಡುಗನ ಮೇಲೆ ಹರಿಹಾಯದೇ ಇದ್ದಿದ್ದರೆ ನಾನು ಇಷ್ಟು ವರ್ಷಗಳಿಂದ ಹಾದಿಕಾಯುತ್ತಿದ್ದ ಹುಡುಗ ಇವತ್ತು ನನಗೆ ಸಿಗುತ್ತಿದ್ದ.'

'ಎಷ್ಟು ವರ್ಷಗಳಿಂದ? ಯಾರು ಆ ಹುಡುಗ? ಏನು ಕತೆ? ನಮ್ಮ ಸೋರಾಬನಿಗೆ ಇಲ್ಲಿಯ ಪೊಲೀಸ್ ಜನರಲ್ಲಿ ಹಲವರ ಪರಿಚಯವಿದೆ.' ಫ್ರೇನಿ ಮನಸ್ಸು ಕಲಕಿದವಳಾಗಿ ಆಶ್ವಾಸನವಿತ್ತಳು.

'ಕಳೆದ 40 ವರ್ಷಗಳಿಂದಲೂ ಹಾದಿ ನೋಡ್ತಾ ಇದ್ದೇನೆ. ಅವನು ಯಾರು ಏನು ಎಂದು ಹೇಗೆ ವಿವರಿಸಲಿ?'

ರಾವ್‌ಜೀಭಾಯಿ ಮಾತಿನಲ್ಲಿ ತನ್ನಷ್ಟಕ್ಕೇ ಆಡಿಕೊಂಡ ಮಾತಿನ ಧಾಟಿ ಮೂಡಿತ್ತು. ಸರಕ್ಕನೆ ಒಬ್ಬರನ್ನೊಬ್ಬರು ನೋಡಿಕೊಂಡ ಜಮಶೇದ ಹಾಗೂ ಫ್ರೇನಿ ಇಬ್ಬರ ಮನಸ್ಸಿನಲ್ಲಿ ಒಂದೇ